**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 85/2023

ಪಿಡಬ್ಲು :1 ಸಿಡಬ್ಲು :1

| | |
|---|---|
| ಸಾಕ್ಷಿಯ ಹೆಸರು | :ಶ್ರೀ.ಸುರೇಶ ನಾಗಪ್ಪ ದೇಮಪ್ಪನವರ |
| ತಂದೆಯ ಹೆಸರು | :ಶ್ರೀ ನಾಗಪ್ಪ ದೇಮಪ್ಪನವರ |
| ವಯಸ್ಸು | : 36 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ಹೊಳೆನಾಗಲಾಪೂರ |
| ದಿನಾಂಕ | : 27-02-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾಃ 12 ರವರು ಪರಿಚಯ ಇರುವುದಿಲ್ಲ. ಚಾಸಾಃ 13 ರಿಂದ ಚಾಸಾಃ 15 ರವರು ಪರಿಚಯ. ಈ ಮೊದಲು ಈ ಪ್ರಕರಣದ 7 ಜನ ಆರೋಪಿತರನ್ನು ನೋಡಿರುತ್ತೇನೆ. ನಾನು ರೈತರ ಜಮೀನಿನಲ್ಲಿ ನೀರಿನ ಪಾಯಂಟ್ ನೋಡುತ್ತೇನೆ ಮತ್ತು ಒಕ್ಕಲುತನವನ್ನೂ ಸಹ ಮಾಡುತ್ತೇನೆ. ಜನರು ನನಗೆ ಸ್ವಾಮಿಗಳು ಅಂತಾ ಕರೆಯುತ್ತಾರೆ. ನನ್ನದು ಹಿಂದೂ ಮಾದರ ಜಾತಿಯಾಗಿರುತ್ತದೆ. ಈ ಪ್ರಕರಣದ 1 ನೇ ಆರೋಪಿ ಮರಾಠಾ, 2 ನೇ ಆರೋಪಿ ಲಿಂಗಾಯತ, 3 ನೇ ಆರೋಪಿ ಮರಾಠಾ, ಇನ್ನೂಳಿದ ಆರೋಪಿರ ಪೈಕಿ ಇಬ್ಬರು ಜೈನರು ಒಬ್ಬರು ನಾಯಕ ಇನ್ನೂಬ್ಬ ಮರಾಠಾ ಜಾತಿಯವರಾಗಿರುತ್ತಾರೆ.

2. 2 ನೇ ಆರೋಪಿಯ ಊರು ವಣ್ಣೂರು ಗ್ರಾಮವಾಗಿದ್ದು, ನನ್ನ ತಾಯಿಯ ತವರುಮನೆ ವಣ್ಣೂರು ಗ್ರಾಮವಾಗಿರುತ್ತದೆ, ಆದ ಕಾರಣ 2 ನೇ ಆರೋಪಿ ನನಗೆ ಮೊದಲಿನಿಂದಲೂ ಪರಿಚಯ. ಈ ಘಟನೆ ಆಗುವ ಎರಡು ವರ್ಷಗಳ ಮುಂಚೆ ಈ ಪ್ರಕರಣದ 1 ನೇ ಆರೋಪಿಯನ್ನು ಗೆಜಪತಿ ಗ್ರಾಮದ ನಮ್ಮ ಜಾತಿಯ ನನ್ನ ಸ್ನೇಹಿತ ಪರಿಚಯ ಮಾಡಿಕೊಟ್ಟಿದ್ದರಿಂದ ಪರಿಚಯವಾಗಿರುತ್ತದೆ. ಪರಿಚಯವಾದ ನಂತರ ನನ್ನೊಂದಿಗೆ 5 ತಿಂಗಳ ನೀರಿನ ಪಾಯಿಂಟ್ ನೋಡಲು ಬರುತ್ತಿದ್ದನು, ನನಗೆ ರೈತರು ಒಂದು ಪಾಯಿಂಟ್ ಗೆ ರೂ.5,000/- ದುಡ್ಡನ್ನು ಕೊಡುತ್ತಿದ್ದರು, ನಾನು ಒಂದು ದಿನಕ್ಕೆ 5-6 ನೀರಿನ ಪಾಯಿಂಟ್‌ನ್ನು ನೋಡುತ್ತಿದ್ದೆ. ರೈತರು ಕೊಟ್ಟ ಹಣವನ್ನು ನನ್ನ ಬ್ಯಾಗನಲ್ಲಿ ನಾನು ಇಟ್ಟುಕೊಳ್ಳುತ್ತಿದ್ದೆ. ಸದರಿ ಹಣವನ್ನು ಈ ಪ್ರಕರಣದ 2 ನೇ ಆರೋಪಿ ನೋಡುತ್ತಿದ್ದನು.

3. ದಿಃ 28.12.2022 ರಂದು ಈ ಪ್ರಕರಣದ 1 ಮತ್ತು 2 ನೇ ಆರೋಪಿತರು ನನ್ನನ್ನು 1 ನೇ ಆರೋಪಿಯ ಊರಾದ ತಾರೀಹಾಳ ಗ್ರಾಮಕ್ಕೆ ಬರಲು ಹೇಳಿದ್ದು ಅದರಂತೆ ನಾನು ಮಧ್ಯಾಹ್ನ 2.30 ಗಂಟೆ ಸುಮಾರಿಗೆ ನನ್ನ ಕಾರ ಗಾಡಿ ನಂಬರ ಜೆಎ 05/ಬಿ -5156 ನ್ನು ತೆಗೆದುಕೊಂಡು ಮರಕಟ್ಟಿ ಗ್ರಾಮದ ಮಾರ್ಗವಾಗಿ ತಾರೀಹಾಳ ಗ್ರಾಮದ ಅಡಿವೆಪ್ಪನ ಮನೆಗೆ ಬಂದೆನು, ಆಗ ಅಡಿವೆಪ್ಪ ಇತನ ಮನೆಯ ಮುಂದೆ ನಾನು ಇದ್ದಾಗ ಅಡಿವೆಪ್ಪನು ನನ್ನನ್ನು ಮನೆ ಒಳಗೆ ಬಾ ಅಂತಾ ಒತ್ತಾಯ ಮಾಡಿದ್ದು ನಾನು ಇರಲಿ ಬಿಡು ಅಂತಾ ಹೇಳಿದ್ದಕ್ಕೆ ಒತ್ತಾಯಪೂರ್ವಕವಾಗಿ ನನಗೆ ಒಳಗೆ ಕರೆದು ನನ್ನನ್ನು ಕೂಡಿಸಿ ನಂತರ ಅಡಿವೆಪ್ಪ ಇತನು ಮೊಬೈಲದಿಂದ ಪೋನ ಮಾಡಿ ಮನೆಗೆ ಬರುವಂತೆ ಹೇಳಿದನು.

4. ಆಗ ನನಗೆ ಪರಿಚಯ ಇಲ್ಲದ ಇಬ್ಬರು 1 ನೇ ಆರೋಪಿ ಮನೆಗೆ ಬಂದರು. ಅವರು ಏಕಾಏಕಿ ನನ್ನ ಗಾಡಿಯ ಚಾವಿಯನ್ನು ಕಸಿದುಕೊಂಡು ಕಿಸೆಯಲ್ಲಿದ್ದಂತಹ ಮೊಬೈಲ ಹಾಗೂ ರೂ.18,000/- ಹಣವನ್ನು ಕಸಿದುಕೊಂಡು ಬಡೆಯಲು ಪ್ರಾರಂಭ ಮಾಡಿದ್ದು, ಆಗ

ನಾನು ಚಿರಾಡುತ್ತಿದ್ದು ಆಗ ನನ್ನನ್ನು ಅಡಿವೆಪ್ಪ ಇತನ ಮೋಟರಸೈಕಲ ಮೇಲೆ ನನ್ನನ್ನು ನಡುವೆ ಕೂಡಿಸಿಕೊಂಡು ನನ್ನ ಹಿಂದೆ 5 ನೇ ಆರೋಪಿ ಅಮಿತ ಕುಳಿತುಕೊಂಡಿದ್ದ, ನನ್ನನ್ನು ಸದರಿ ಮನೆಯಿಂದ ಕೆಳಗಿನ ಮನೆಗೆ ಕರೆದುಕೊಂಡು ಹೋಗಿ ಒಂದು ಮನೆಯಲ್ಲಿ ನನ್ನ ಕೈಗೆ, ಕಾಲಿಗೆ ಹಗ್ಗ ಕಟ್ಟಿ ಮೇಲೆ ತೂಗು ಹಾಕಿದ್ದು ಆಗ ಅಡಿವೆಪ್ಪ ಇತನು ಮತ್ತೆ ಇಬ್ಬರನ್ನು ಪೋನ ಮಾಡಿ ಕರೆಸಿದ್ದು ಅಲ್ಲಿಗೆ ಈ ಪ್ರಕರಣದ ಆರೋಪಿ ಸಂತೋಷ, ಅನಂತ ಮತ್ತು ಸಂಪತ್ ಅವರು ಅಲ್ಲಿಗೆ ಬಂದಿದ್ದು ಆಗ ಹಗ್ಗ ತೆಗೆದುಕೊಂಡು ಸಂತೋಷ ನನಗೆ ಹೊಡೆದಿರುತ್ತಾನೆ, ಆರೋಪಿಯಾದ ಮೋಹನ ಇತನು ಕಬ್ಬಿಣದ ಪೈಪ ತೆಗೆದುಕೊಂಡು ದುಬ್ಬಕ್ಕೆ, ಕೈ, ಕಾಲಿಗೆ ಮತ್ತು ಮೈಗೆ ಬಡೆದಿರುತ್ತಾನೆ.

ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮಧ್ಯಾಹ್ನ ಅವಧಿಗೆ ಮುಂದೂಡಲಾಯಿತು.

ಸಾಕ್ಷಿಯನ್ನು ಪುನಃ 3.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

5. ಈ ಪ್ರಕರಣದ 7 ನೇ ಆರೋಪಿ ಕೊಡಲಿ ಕಾವಿನಿಂದ ನನ್ನ ಮೊಣಕಾಲಿಗೆ, ಕೈಬೆರಳಿಗೆ ಮತ್ತು ಮೊಣಕೈಗೆ ಬಡೆದಿರುತ್ತಾನೆ. ಈ ಪ್ರಕರಣದ 4 ನೇ ಆರೋಪಿ ಸಣ್ಣ ಚಾಕುವಿನಿಂದ ಕಾಲಿನ ಬೆರಳಿನ ಹತ್ತಿರ ಚುಚ್ಚಿ ಗಾಯಪಡಿಸಿದನು. ಅದೇ ರೀತಿ 4 ನೇ ಆರೋಪಿ ಒಂದು ಪಿಸ್ತೂಲನ್ನು ತೆಗೆದುಕೊಂಡು ಬಂದು ಇ ಹೊಲೆಯ ಸೂಳೆಮಗನ ಕೊಂದುಬಿಡುತ್ತೇನೆ ಅಂತಾ ನನಗೆ ತೋರಿಸಿ ಜೀವ ಬೆದರಿಕೆ ಹಾಕಿರುತ್ತಾನೆ. ಆರೋಪಿತರೆಲ್ಲರೂ ನನಗೆ ನಿನ್ನನ್ನು ಜೀವ ಸಹಿತ ಬಿಡಬೇಕಾದರೆ 10 ಲಕ್ಷ ಹಣ ತರಿಸಿಕೊಡು ಅಂತಾ ನನ್ನನ್ನು ಅಕ್ರಮ ಬಂಧನದಲ್ಲಿಟ್ಟು ಹಣವನ್ನು ಬೇಡಿಕೆ ಇಟ್ಟಾಗ ನಾನು ಹಣ ಕೊಡುವುದಾಗಿ ಹೇಳಿದಂತೆ ಹೊಡೆಯುವುದನ್ನು ನಿಲ್ಲಿಸಿರುತ್ತಾರೆ.

6. ಆ ದಿನ ರಾತ್ರಿ ನನ್ನನ್ನು ಅಕ್ರಮ ಬಂಧನದಲ್ಲಿ ಇರಿಸಿದ್ದು, ದಿಃ 29.12.2022 ರಂದು ಬೆಳಗ್ಗೆ 8.00 ಗಂಟೆಗೆ ಆರೋಪಿತರು ನನ್ನ ಬಂಧನದಲ್ಲಿಟ್ಟು ಹಣ ತರಸು ಅಂತಾ ಹೊಡೆಬಡೆ ಮಾಡಿದ್ದು ಮಧ್ಯಾಹ್ನ 2.30 ಗಂಟೆಗೆ ನಾನು ಹಣ ಕೊಡುವುದಾಗಿ ರಾಮದುರ್ಗ ಕಡೆಗೆ ಹೋಗೋಣ ಅಂತಾ ಹೇಳಿದಾಗ ನನ್ನ ಕಾರ ಗಾಡಿಯಲ್ಲಿ ನನ್ನನ್ನು ಆರೋಪಿತರು ಕರೆದುಕೊಂಡು ಹೊರಟಿದ್ದು, ಸದರಿ ಕಾರ ಗಾಡಿಯನ್ನು 7 ನೇ ಆರೋಪಿ ಚಲಾಯಿಸಿಕೊಂಡು ಹೊರಟಿದ್ದು ಮೊದಗಾ ಹತ್ತಿರ ಈ ಪ್ರಕರಣದ 4 ನೇ ಆರೋಪಿ ಕೆಳಗೆ ಇಳಿದನು.

7. ಅಲ್ಲಿಂದ ರಾಮದುರ್ಗದ ಕಡೆಗೆ ಹೊರಟಿದ್ದು ಕಟಕೋಳದ ಹತ್ತಿರ ಇರುವ ಒಂದು ಬೇಕರಿ ಹತ್ತಿರ ಕಾರನ್ನು ತರಬಿ ಆರೋಪಿತರೆಲ್ಲರೂ ಕೆಳಗೆ ಇಳಿದಿದ್ದು ನಾನು ಕಾರಿನಲ್ಲಿ ಕುಳಿತಿದ್ದು ಅವರೆಲ್ಲರೂ ಎಗ್ ಪಪ್ ತಿಂದು ಸೋಡಾ ಕುಡಿದಿದ್ದು, ನನಗೂ ಸಹ ಎಗ್ ಪಪ್ ಮತ್ತು ನೀರಿನ ಬಾಟಲಿ ತಂದು ಕೊಟ್ಟರು, ನಾನು ಅರ್ಧ ಎಗ್ ಪಪ್ ತಿಂದಿರುತ್ತೇನೆ. ಕಾರು ನಿಲ್ಲಿಸಿದ ಸ್ವಲ್ಪ ದೂರದಲ್ಲಿ ಕಟಕೋಳ ಪೋಲಿಸ ಠಾಣೆ ಕಾಣುತ್ತಿತ್ತು. ನಾನು ಕಾರಿನಿಂದ ಇಳಿದವನೇ ಅವರಿಂದ ತಪ್ಪಿಸಿಕೊಂಡು ಪೋಲಿಸ ಠಾಣೆ ಕಡೆಗೆ ಓಡುತ್ತಾ ಹೊರಟಿದ್ದು ಆಗ ಆರೋಪಿತರೆಲ್ಲರೂ ನನ್ನ ಹಿಂದೆ ಬೆನ್ನು ಹತ್ತಿ ಓಡಿ ಬರುತ್ತಿದ್ದು ನಾನು ತಪ್ಪಿ ಸಿಕೊಂಡು ಕಟಕೋಳ ಪೋಲಿಸ ಠಾಣೆ ಒಳಗಡೆ ಹೋಗಿರುತ್ತೇನೆ.

8. ನಾನು ಠಾಣೆಯ ಒಳಗಡೆ ಹೋಗಿ ಅಲ್ಲಿದ್ದಂತಹ ಪಿ.ಎಸ್.ಐ ಮತ್ತು ಪೋಲಿಸರಿಗೆ ನಡೆದ ಘಟನೆಯನ್ನು ತಿಳಿಸಿದ್ದು ಆ ಸಮಯದಲ್ಲಿ ಚಾಸಾಃ 13 ಮತ್ತು ಚಾಸಾಃ 14 ರವರು ಠಾಣೆಯಲ್ಲಿದ್ದರು, ಆಗ ಪಿ.ಎಸ್.ಐ ರವರು ಹಾಗೂ ಒಂದಿಬ್ಬರು ಪೋಲಿಸರು ಹೊರಗೆ ಬಂದು ನೋಡಲು ನಿಲ್ಲಿಸಿದ ಸ್ಥಳದಲ್ಲಿ ಕಾರು ಇರಲಿಲ್ಲ ಹಾಗೂ ಆರೋಪಿತರು ಇರಲಿಲ್ಲ, ಸದರಿಯವರು ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದರು. ನಂತರ ನಾನು ಅಲ್ಲಿಂದ ಖಾಸಗಿ

ವಾಹನದಲ್ಲಿ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಹೋಗಿ ಉಪಚಾರಕ್ಕೆಂದು ದಾಖಲಾಗಿ ಉಪಚಾರ ಪಡೆದುಕೊಂಡೇನು. ನಂತರ ನನ್ನ ಬೆರಳು ಮುರಿದಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಬೈಲಹೊಂಗಲದಲ್ಲಿರುವ ಚಿದಂಬರ ಕುಲಕರ್ಣಿ ಎನ್ನುವ ಖಾಸಗಿ ವೈದ್ಯರ ಹತ್ತಿರ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

9. ನಂತರ ಅಲ್ಲಿ ಚಿಕಿತ್ಸೆ ಪಡೆದುಕೊಂಡು ವಾಪಸ್ ಮತ್ತೆ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆಗಾಗಿ ದಾಖಲಾಗಿರುತ್ತೇನೆ. ನಂತರ ದಿಃ 30.12.2022 ರಂದು 8.00 ರಿಂದ 9.00 ಗಂಟೆ ಸುಮಾರಿಗೆ ಸದರಿ ಆಸ್ಪತ್ರೆಯಿಂದ ಉಪಚಾರ ಪಡೆದುಕೊಂಡು ಮನೆಗೆ ಹೋಗಿ ಘಟನೆ ಬಗ್ಗೆ ನಮ್ಮ ಮನೆಯ ಜನರೊಂದಿಗೆ ಚರ್ಚಿಸಿ ದಿಃ 31.12.2022 ರಂದು ಹಿರೇಬಾಗೇವಾಡಿ ಪೋಲಿಸ ಠಾಣೆಗೆ ಹೋಗಿ ಚಾಸಾಃ13 ರವರಿಂದ ಲಿಖಿತವಾದ ದೂರನ್ನು ಬರೆಸಿ ಪೋಲಿಸರಿಗೆ ನೀಡಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಿಯಾಗಿದ್ದು, ಅದನ್ನು ನಿಪಿಃ1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ1 ಎ ಎಂದು ಗುರುತಿಸಲಾಯಿತು.

10. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳಾದ ಹಗ್ಗ, ಪೈಪ್, ಕೊಡಲಿ, ಪಿಸ್ತೂಲ, ಚಾಕು ಹಾಗೂ ಆರೋಪಿತರು ನನ್ನನ್ನು ಅಪಹರಿಸಿಕೊಂಡು ಹೋಗುವಾಗ ಬಳಕೆ ಮಾಡಿದ ನನ್ನ ಕಾರು ಮತ್ತು ಮೋಟರಸೈಕಲಗಳನ್ನು ನೋಡಿದರೆ ಗುರುತಿಸಬಲ್ಲೆ.

11. ದೂರು ನೀಡಿದ ನಂತರ ಪೋಲಿಸರು ಮೊದಲನೇ ಘಟನಾ ಸ್ಥಳವಾದ 1 ನೇ ಆರೋಪಿ ಮನೆಯ ಹತ್ತಿರ ಬಂದಿದ್ದು ಆಗ ಸದರಿ ಸ್ಥಳದಲ್ಲಿ ಇಬ್ಬರು ಪಂಚರಿದ್ದು ಸದರಿಯವರ ಸಮಕ್ಷಮದಲ್ಲಿ ನಾನು ಪೋಲಿಸರಿಗೆ ಇದೇ ಮನೆಯಲ್ಲಿ ಆರೋಪಿತರು ನನ್ನನ್ನು

ಒತ್ತಾಯಪೂರ್ವಕವಾಗಿ ಮನೆ ಒಳಗಡೆ ಕರೆದುಕೊಂಡು ಹೋಗಿ ನನ್ನ ಹತ್ತಿರ ಇದ್ದಂತಹ ಮೊಬೈಲ ಪೋನ, ನನ್ನ ಕಿಸೆಯಲ್ಲಿದ್ದಂತಹ ಕಾರ ಗಾಡಿ ಚಾವಿ ಹಾಗೂ ನನ್ನ ಕಿಸೆಯಲ್ಲಿದ್ದಂತಹ ರೂ.18,000/- ಹಣವನ್ನು ಕಿತ್ತುಕೊಂಡ ಜಾಗ ಇದೆ ಎಂದು ಹೇಳಿ ತೋರಿಸಿರುತ್ತೇನೆ. ಅದೇ ರೀತಿ ಅಲ್ಲಿಂದ ನನ್ನನ್ನು ಆರೋಪಿತರು ಕಟ್ಟಿಹಾಕಿ, ಕೂಡಿಹಾಕಿ ಹಗ್ಗದಿಂದ, ಪೈಪನಿಂದ, ಚಾಕುವಿನಿಂದ ಹಾಗೂ ಕೊಡಲಿಯಿಂದ ಹೊಡೆದು ಜಾತಿ ನಿಂದನೆ ಮಾಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಸದರಿ ಸ್ಥಳವನ್ನು ನಾನು ತೋರಿಸಿದ ಮೇರೆಗೆ ಪೋಲಿಸರು ಪಂಚನಾಮೆ ಮಾಡಿ ಪೋಟೋವನ್ನು ತೆಗೆದಿರುತ್ತಾರೆ. ಅದೇ ಸಂದರ್ಭದಲ್ಲಿ ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಎರಡು ಪ್ಲಾಸ್ಟಿಕ ನೈಲಾನ ಹಗ್ಗ, ಒಂದು ಕಟ್ಟಿಗೆ ಹಿಡಿಕೆಯ ಕಬ್ಬಿಣದ ಕೊಡಲಿ ಹಾಗೂ ಇನ್ನೊಂದು ಚಾಕು ಇವುಗಳನ್ನು ಮುಂದಿನ ಕ್ರಮಕ್ಕಾಗಿ ಪೋಲಿಸರು ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿ ಪೋಟೋಗಳನ್ನು ತೆಗೆದಿರುತ್ತಾರೆ.

12. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ದೋಷಾರೋಪನೆ ಪುಟ ಸಂಖ್ಯೆ 14 ಮತ್ತು 15 ರಲ್ಲಿರುವ 3 ಪೋಟೋಗಳನ್ನು ತೋರಿಸಲಾಗಿ, ಅವುಗಳಲ್ಲಿ ತಾನು, ಪೋಲಿಸರು ಹಾಗೂ ಇತರರು ಇರುವುದಾಗಿ ನೋಡಿ ಗುರುತಿಸಿ ಅವುಗಳನ್ನು ಆರೋಪಿತರು ತನ್ನನ್ನು ಕೂಡಿಹಾಕಿ ಹಲ್ಲೆ ಮಾಡಿದ ಸ್ಥಳದ ಪೋಟೋಗಳು ಹಾಗೂ ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ದೋಷಾರೋಪನೆ ಪುಟ ಸಂಖ್ಯೆ 16 ಮತ್ತು 17 ರಲ್ಲಿರುವ 3 ಪೋಟೋಗಳನ್ನು ತೋರಿಸಲಾಗಿ, ಅವುಗಳಲ್ಲಿ ತಾನು, ಪೋಲಿಸರು ಹಾಗೂ ಇತರರು ಇರುವುದಾಗಿ ನೋಡಿ ಗುರುತಿಸಿ ಅವುಗಳನ್ನು ಪೋಲಿಸರಿಗೆ ನಾನು ಚಾಕು, ಕೊಡಲಿ ಹಾಗೂ ಹಗ್ಗವನ್ನು ಹಾಜುರುಪಡಿಸಿದ ಸಂದರ್ಭದಲ್ಲಿ ತೆಗೆದ ಪೋಟೋಗಳು ಎಂದು ನೋಡಿ

ಗುರುತಿಸಿದ್ದು ಆದ ಕಾರಣ ಸದರಿ 6 ಪೋಟೋಗಳನ್ನು ನಿಪಿಃ 3 ರಿಂದ ನಿಪಿಃ 8 ಎಂದು ಗುರುತಿಸಲಾಯಿತು.

13. ಅದೇ ದಿನ ನನ್ನನ್ನು ಪೋಲಿಸರು ಸದರಿ ಸ್ಥಳದಿಂದ ಕಟಕೋಳದಲ್ಲಿರುವ ನಾನು ಕಾರಿನಿಂದ ತಪ್ಪಿಸಿಕೊಂಡು ಹೋದ ಜಾಗಕ್ಕೆ ಕರೆದುಕೊಂಡು ಹೋಗಿದ್ದು ಆಗ ನಾನು ಹೇಳಿ ತೋರಿಸಿದಂತೆ ಪೋಲಿಸರು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು ಹಾಗೂ ಬೇಕರಿಯಲ್ಲಿದ್ದಂತಹ ಸಿಸಿ ಕ್ಯಾಮರಾದ ಸಿಸಿ ಟಿವಿ ಪೂಟೇಜಗಳನ್ನು ಸಂಗ್ರಹ ಮಾಡಿದ್ದು ಆ ಸಂದರ್ಭದಲ್ಲಿಯೂ ಸಹ ಪೋಲಿಸರು ಪಂಚನಾಮೆ ಮಾಡಿ ಪೋಟೋವನ್ನೂ ಸಹ ತೆಗೆದಿರುತ್ತಾರೆ. ಆ ದಿನ ಸಿಸಿ ಕ್ಯಾಮರಾದ ಸಿಸಿ ಟಿವಿ ಪೂಟೇಜಗಳನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಿಯವರು ಆರೋಪಿತರಿಂದ ತಪ್ಪಿಸಿಕೊಂಡ ಹೋದ ಸ್ಥಳದ ಪಂಚನಾಮೆ ಹಾಗೂ ಸಿಸಿ ಕ್ಯಾಮರಾದ ಸಿಸಿ ಟಿವಿ ಪೂಟೇಜಗಳನ್ನು ಸಂಗ್ರಹ ಮಾಡಿದ ಪಂಚನಾಮೆಯಾಗಿದ್ದು ಅದನ್ನು ನಿಪಿಃ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 9 ಎ ಎಂದು ಗುರುತಿಸಲಾಯಿತು. ಅದೇ ರೀತಿ ದೋಷಾರೋಪಣೆ ಪುಟ ಸಂಖ್ಯೆ 26 ಮತ್ತು 27 ರಲ್ಲಿರುವ 3 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತಾನು, ಪೋಲಿಸರು ಹಾಗೂ ಇತರರು ಇರುವುದಾಗಿ ನೋಡಿ ಗುರುತಿಸಿ ಅವುಗಳನ್ನು ಮೇಲಿನ ಪಂಚನಾಮೆ ಸಂದರ್ಭದಲ್ಲಿ ತೆಗೆಯಲಾಗಿದ್ದು ಎಂದು ನೋಡಿ ಗುರುತಿಸಿದ್ದು ಆದ ಕಾರಣ ಸದರಿ 3 ಪೋಟೋಗಳನ್ನು ನಿಪಿಃ10 ರಿಂದ ನಿಪಿಃ12 ಎಂದು ಗುರುತಿಸಲಾಯಿತು.

14. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೋಲಿಸರಿಗೆ ನಾನು ದೂರು ನೀಡಿದ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದು ಠಾಣೆಯಲ್ಲಿ ಈ ಪ್ರಕರಣದ 1 ಮತ್ತು 2 ನೇ ಆರೋಪಿತರು ಪೋಲಿಸ ತಾಬಾದಲ್ಲಿದ್ದು

ಅವರನ್ನು ತೋರಿಸಿದ್ದು ನಾನು ನೋಡಿ ಗುರುತಿಸಿ ಪೋಲಿಸರಿಗೆ ಮರುಹೇಳಿಕೆ ನೀಡಿರುತ್ತೇನೆ. ನಾನು ಬಳಸುತ್ತಿದ್ದ ಕಾರನ್ನು ಅದರ ಮಾಲೀಕರಾದ ಚಾಸಾಃ 15 ರವರು ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಅವರ ತಾಬಾಕ್ಕೆ ಪಡೆದುಕೊಂಡಿರುತ್ತಾರೆ. 1 ನೇ ಆರೋಪಿ ತನ್ನ ಮೋಟರಸೈಕಲನ್ನು ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ತನ್ನ ತಾಬಾಕ್ಕೆ ಪಡೆದುಕೊಂಡಿರುವುದಾಗಿ ಒಪ್ಪಿಕೊಂಡಿದ್ದು ಇರುತ್ತದೆ.

15. ದೋಷಾರೋಪಣೆ ಪುಟ ಸಂಖ್ಯೆ 33 ರಲ್ಲಿರುವ ಪೋಟೋದಲ್ಲಿ ಕಂಡು ಬರುವ ಕಾರು ಮತ್ತು ಮೋಟರಸೈಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಆದ ಕಾರಣ ಸದರಿ ಎರಡು ಪೋಟೋಗಳನ್ನು ನಿಪಿಃ13 ಮತ್ತು ನಿಪಿಃ 14 ಎಂದು ಗುರುತಿಸಲಾಯಿತು. ಸದರಿ ಕಾರನ್ನು ಎಮ್.ಓ.1 ಹಾಗೂ ಮೋಟರಸೈಕಲನ್ನು ಎಮ್.ಓ.2 ಎಂದು ಗುರುತಿಸಲಾಯಿತು. ಆ ದಿನ ನನ್ನ ಮೇಲೆ ಹಲ್ಲೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ.

**ಈ ಹಂತದಲ್ಲಿ ವಸ್ತುಗಳನ್ನು ಗುರುತಿಸುವಿಕೆಯ ಸಲುವಾಗಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.